**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 38/2020**

**ಚಾ.ಸಾ. :-5**
**ಪ್ರಾ.ಸಾ. :-6**

| | |
|---|---|
| ಹೆಸರು | : ರಮೇಶ್ |
| ತಂದೆಯ ಹೆಸರು | : ಮಹದೇವಸ್ವಾಮಿ |
| ವಯಸ್ಸು | : 24 ವರ್ಷ |
| ಉದ್ಯೋಗ | : ಖಾಸಗೀ ಕೆಲಸ |
| ವಾಸಸ್ಥಳ | : ಚನ್ನಪಟ್ಟಣ |

---

**ಪ್ರಮಾಣೀಕರಿಸಲಾದ ದಿನಾಂಕಃ- 21.04.2026.**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಚಾ.ಸಾ-6, ಮೃತ ಕಿರಣ್ ಹಾಗೂ ಆರೋಪಿ ಪರಿಚಯ. ಸುಮಾರು 6 ವರ್ಷಗಳ ಹಿಂದೆ ಆರೋಪಿ, ನಾನು, ಚಾ.ಸಾ-6 ಹಾಗೂ ಮೃತ ಕಿರಣ್ ರವರು ಬಿಳಿಯ ಬಣ್ಣದ ಮಾರುತಿ ಸಿಫ್ಟ್ ಕಾರಿನಲ್ಲಿ ಚನ್ನಪಟ್ಟಣದಿಂದ ಗುಂಡ್ಲುಪೇಟೆಗೆ ಹೋಗುತ್ತಿದ್ದೆವು. ಸದರಿ ಕಾರನ್ನು ಮೃತ ಕಿರಣ್ ಚಾಲನೆ ಮಾಡುತ್ತಿದ್ದರು. ಕಿರಣ್ ಪಕ್ಕದ ಮುಂಭಾಗದ ಸೀಟಿನಲ್ಲಿ ಆರೋಪಿ ಕುಳಿತಿದ್ದರು, ಹಿಂಭಾಗದ ಸೀಟ್ ಗಳಲ್ಲಿ ನಾನು ಮತ್ತು ಚಾ.ಸಾ-6 ಕುಳಿತಿದ್ದೆವು. ಆ ಸಮಯದಲ್ಲಿ ನಾನು ನಿದ್ದೆ ಮಾಡುತ್ತಿದ್ದೆ, ಅಪಘಾತವಾದ ನಂತರ ನನಗೆ ಪ್ರಜ್ಞೆ ತಪ್ಪಿರುತ್ತದೆ. ಅಪಘಾತ ಸಮಯದಲ್ಲೂ ಸಹ ಕಾರನ್ನು ಮೃತ ಕಿರಣ್ ಚಾಲನೆ ಮಾಡುತ್ತಿದ್ದರು. ನನಗೆ ತುಟಿಗೆ ಗಾಯವಾಗಿತ್ತು. ಸಾರ್ವಜನಿಕರು ನಮ್ಮನ್ನು ಆ್ಯಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಪೊಲೀಸರಿಗೆ ಅಪಘಾತದ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು*

*ಪರಿಶೀಲಿಸಿ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)*

**<u>ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :</u>**

ಪೊಲೀಸರಿಗೆ ಹೇಳಿಕೆ ನೀಡಿದಾಗ ನಮ್ಮ ಕಾರನ್ನು ಆರೋಪಿ ಆನಂದ್ ರವರು ಚಾಲನೆ ಮಾಡಿರುತ್ತಾರೆಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನಾನು ಅಪಘಾತವಾದಾಗ ಎಚ್ಚರಗೊಂಡಿದ್ದು, ಆ ಸಮಯದಲ್ಲಿ ಕಿರಣ್ ರವರು ಚಾಲಕನ ಸೀಟಿನಲ್ಲಿಯೇ ಕುಳಿತಿದ್ದರು ಎನ್ನುತ್ತಾರೆ.

ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಸಂಪೂರ್ಣ ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯ ಕೆಲವು ಭಾಗಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯ ಭಾಗಗಳನ್ನು ಈಗ ನಿಪಿ18 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-8 ರಲ್ಲಿ ನಾವು ಆ ದಿನ ಹೋಗುತ್ತಿದ್ದೆವು. ನಿಪಿ-8 ರಲ್ಲಿ ಎಡಭಾಗದಲ್ಲಿ ಹೆಚ್ಚು ಜಖಂ ಆದ ಕಾರಣ ಎಡಭಾಗದಲ್ಲಿ ಕುಳಿತ ವ್ಯಕ್ತಿ ಮೃತಪಡಲು ಸಾಧ್ಯ ಎಂದರೆ ಸರಿಯಲ್ಲ.

ಆರೋಪಿ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**